ಭ್ರಷ್ಟಾಚಾರ ಸರ್ಕಾರದ ಪತನಕ್ಕೆ ಕಾರಣವಾಗಲಿದೆ: ಸೋಮಣ್ಣ

• **ಕನ್ನಡಪ್ರಭ ವಾರ್ತೆ** ಹುಬ್ಬಳ್ಳಿ

ರಾಜ್ಯ ಕಾಂಗ್ರೆಸ್ ಸರ್ಕಾರದಲ್ಲಿ ಭಾರಿ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಗುತ್ತಿಗೆದಾರರು ಆರೋಪಿಸುತ್ತಿದ್ದಾರೆ. ಇದು ಮುಂದೆ ಕಾಂಗ್ರೆಸ್ ಸರ್ಕಾರದ ಪತನಕ್ಕೂ ಕಾರಣವಾಗಲಿದೆ ಎಂದು ಕೇಂದ್ರದ ರಾಜ್ಯ ರೈಲ್ವೆ ಖಾತೆ ಸಚಿವ ವಿ. ಸೋಮಣ್ಣ ಆರೋಪಿದರು. ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪರ್ಸೆಂಟೇಜ್ ವಿಚಾರದಲ್ಲಿ ಗುತ್ತಿಗೆದಾರರ ಆರೋಪ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದರು. ಈ ಹಿಂದೆ ಬಿಜೆಪಿ ಆಡಳಿತದಲ್ಲಿ ಪರ್ಸೆಂಟೇಜ್ ಆರೋಪ ಮಾಡಿ, ಚುನಾವಣೆಯಲ್ಲಿ ಸೋಲಿಗೆ ಕಾರಣರಾದರು. ಈಗ ಕಾಂಗ್ರೆಸ್‌ನಲ್ಲಿ ಭ್ರಷ್ಟಾಚಾರವಿದೆ ಎಂದು ಗುತ್ತಿಗೆದಾರರೇ ಆರೋಪಿಸುತ್ತಿದ್ದಾರೆ ಎಂದರು. ಕಾಂಗ್ರೆಸ್ ಪಕ್ಷದಲ್ಲಿರುವ ಸಲಹೆಗಾರರೇ ನಂಬರ್‌ಒನ್ ಭ್ರಷ್ಟ ಸರ್ಕಾರ ಎಂದು ಹೇಳಿಕೆ ನೀಡಿದ್ದಾರೆ. ಇಂತಹ ಸರ್ಕಾರ ಅಧಿಕಾರದಲ್ಲಿ ಇರಬಾರದು. ಸಿದ್ದರಾಮಯ್ಯ ಆಡಳಿತ ವ್ಯವಸ್ಥೆಯಲ್ಲಿ ಈ ರೀತಿಯಾಗಿ ನಡೆದುಕೊಳ್ಳುತ್ತಾರೆ ಎಂದು ನಾನು ಕನಸಿನಲ್ಲೂ ಅಂದುಕೊಂಡಿರಲಿಲ್ಲ, ನಾನು ಸಹ ಸಿದ್ದರಾಮಯ್ಯ ಜತೆ ಅನೇಕ ವರ್ಷಗಳ ಕಾಲ ಕೆಲಸ ಮಾಡಿದ್ದೇನೆ. ಹಳೆ ಸಿದ್ದರಾಮಯ್ಯ ರಂತೆ ಈಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ರೈತರ ಬಗ್ಗೆ ಕಾಳಜಿ ಇಲ್ಲ: ಬೇಸಿಗೆ ಕಾಲ ಆರಂಭವಾಗಿದ್ದು, ಜನ-ಜಾನುವಾರುಗಳಿಗೆ ಕುಡಿಯಲು ನೀರಿಲ್ಲದೆ ಸಮಸ್ಯೆ ಎದುರಿಸುತ್ತಿದ್ದಾರೆ. ರೈತರ ಬಗ್ಗೆ ಸರ್ಕಾರಕ್ಕೆ ಕಾಳಜಿ ಇಲ್ಲ. ಅವರದೇ ಆದ ಮನಸ್ಥಿತಿಯನ್ನು ಇಟ್ಟುಕೊಂಡು ಜನರ ದಿಕ್ಕು ಬೇರೆಡೆಗೆ ಸೆಳೆಯುವ ಕಾರ್ಯವನ್ನು ಮಾಡುತ್ತಿದ್ದಾರೆ ಎಂದು ಸರ್ಕಾರದ ವಿರುದ್ಧ ವಿ. ಸೋಮಣ್ಣ ಹರಿಹಾಯ್ದರು.

ವಕ್ಫ್ ಮಸೂದೆ ತಿದ್ದುಪಡಿ ಖಂಡಿಸಿ ಬೃಹತ್ ಪ್ರತಿಭಟನೆ

ವಕ್ಫ್ ಮಸೂದೆ ತಿದ್ದುಪಡಿ ಮಸೂದೆ ಖಂಡಿಸಿ ಅಂಜುಮನ್ ಎ-ಇಸ್ಲಾಂ ಸಂಸ್ಥೆಯ ನೇತೃತ್ವದಲ್ಲಿ ಅಂಜುಮನ್ ಆವರಣದಿಂದ ಡಿಸಿ ಕಚೇರಿ ವರೆಗೂ ಮೌನ ಪ್ರತಿಭಟನೆ ನಡೆಸಲಾಯಿತು.

• **ಕನ್ನಡಪ್ರಭ ವಾರ್ತೆ** ಧಾರವಾಡ

ಕೇಂದ್ರ ಸರ್ಕಾರದ ವಕ್ಫ್ ತಿದ್ದುಪಡಿ ಮಸೂದೆ-2025 ಖಂಡಿಸಿ ಅಂಜುಮನ್ ಎ-ಇಸ್ಲಾಂ ಸಂಸ್ಥೆ, ಮುಸ್ಲಿಂ ಸಮುದಾಯ ಹಾಗೂ ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಘಟಕದಿಂದ ನಗರದಲ್ಲಿ ಶುಕ್ರವಾರ ಬೃಹತ್ ಪ್ರತಿಭಟನೆ ನಡೆಸಲಾಯಿತು. ಅಂಜುಮನ್ ಎ-ಇಸ್ಲಾಂ ಸಂಸ್ಥೆಯ ನೇತೃತ್ವದಲ್ಲಿ ಅಂಜುಮನ್ ಆವರಣದಿಂದ ಡಿಸಿ ಕಚೇರಿ ವರೆಗೂ ಮೌನ ಪ್ರತಿಭಟನೆ ನಡೆಸಲಾಯಿತು. ಇದಕ್ಕೂ ಮುನ್ನ ಮಸೀದಿಗಳಲ್ಲಿ ಶುಕ್ರವಾರದ ನಮಾಜ್ ಸಲ್ಲಿಸಿದ ಬಳಿಕ ಅಂಜುಮನ್ ಸಂಸ್ಥೆಯ ಆವರಣದಲ್ಲಿ ಮೌಲ್ವಿಗಳು ಸೇರಿದಂತೆ ಮುಸ್ಲಿಂ ಸಮಾಜದವರು ಸಮಾವೇಶಗೊಂಡರು. ಆ ಬಳಿಕ ಅಲ್ಲಿಂದ ಜ್ಯುಬಿಲಿ ವೃತ್ತ, ಕೋರ್ಟ್ ಸರ್ಕಲ್ ಮಾರ್ಗವಾಗಿ ಡಿಸಿ ಕಚೇರಿ ವರೆಗೂ ಬೃಹತ್ ಮೌನ ಪ್ರತಿಭಟನೆ ನಡೆಸಲಾಯಿತು. ಡಿಸಿ ಕಚೇರಿಯ ಎದುರು ಪ್ರತಿಭಟನೆ ನಡೆಸುವ ವೇಳೆ ಜೋರಾದ ಮಳೆ ಸುರಿದರೂ ಮಳೆಯಲ್ಲಿಯೇ ಪ್ರತಿಭಟನಾ ಧರಣಿ ಕೈಗೊಂಡಿದಲ್ಲದೇ ಜಿಲ್ಲಾಡಳಿತದ ಮೂಲಕ ರಾಷ್ಟ್ರಪತಿ ಅವರಿಗೆ ಮನವಿ ಸಲ್ಲಿಸಲಾಯಿತು. ವಕ್ಫ್ ತಿದ್ದುಪಡಿ ಮಸೂದೆಯಿಂದ ಸಂವಿಧಾನದಲ್ಲಿ ನೀಡಲಾದ ಹಕ್ಕುಗಳು ಮತ್ತು ಪ್ರಮುಖ ಧಾರ್ಮಿಕ ಸಾಂಸ್ಕೃತಿಕ ಮತ್ತು ಐತಿಹಾಸಿಕ ಸಂಸ್ಥೆಗಳ ಅವನತಿಗೆ ಕಾರಣವಾಗಬಹುದು. ಅಂತಹ ತಿದ್ದುಪಡಿಗಳನ್ನು ಜಾರಿಗೊಳಿಸಿದರೆ ಸಮುದಾಯ ಮತ್ತು ರಾಜ್ಯದ ನಡುವಿನ ನಂಬಿಕೆ ಮತ್ತು ಸಾಮರಸ್ಯಕ್ಕೆ ದೀರ್ಘಾವಧಿಯ ಹಾನಿ ಉಂಟಾಗುತ್ತದೆ ಎಂದು ದೂರಲಾಯಿತು.

ಈ ಮಸೂದೆಗಳನ್ನು ಅಂಗೀಕರಿಸುವುದರಿಂದ ಸಮಾಜವು ಸಂಬಂಧಗಳನ್ನು ಮರೆತು ಬಣಗಳು ಮತ್ತು ಗುಂಪುಗಳಾಗಿ ವಿಭಜನೆಯಾಗುತ್ತದೆ. ನ್ಯಾಯ, ಸಾಂವಿಧಾನಿಕ ಮೌಲ್ಯಗಳು ಮತ್ತು ಕೋಮು ಸೌಹಾರ್ದದ ಹಿತದೃಷ್ಟಿಯಿಂದ, ಮಸೂದೆಯನ್ನು ತಕ್ಷಣವೇ ಹಿಂಪಡೆಯಲು ಮತ್ತು ರದ್ದುಪಡಿಸುವಂತೆ ಆಗ್ರಹಿಸಲಾಯಿತು. ಈ ವೇಳೆ ಸಂಸ್ಥೆಯ ಅಧ್ಯಕ್ಷ ಮೊಹಮ್ಮದ ಇಸ್ಮಾಯಿಲ್ ತಮಟಗಾರ, ಉಪಾಧ್ಯಕ್ಷ ಬಶೀರಅಹ್ಮದ ಜಹಾಂಗೀರದಾರ, ಪದಾಧಿಕಾರಿಗಳಾದ ಎಸ್.ಎಸ್.ಸರಗೀರೋ, ಮಹಮ್ಮದಶಫಿಕಳ್ಳಿಮನಿ, ಮಹಮ್ಮದರಫೀಕ ಶಿರಹಟ್ಟಿ ಸೇರಿದಂತೆ ಮೌಲ್ವಿಗಳು, ಸಮಾಜದವರು ಪಾಲ್ಗೊಂಡಿದ್ದರು.

ಪ್ರತಿಭಟನೆ-ಬಂಧನ: ಇದಕ್ಕೂ ಮುನ್ನ ಬೆಳಗ್ಗೆ ಕೇಂದ್ರ ಸರ್ಕಾರದ ವಕ್ಫ್ ತಿದ್ದುಪಡಿ ಮಸೂದೆ-2025 ಹಿಂಪಡೆಯುವಂತೆ ಆಗ್ರಹಿಸಿ ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಘಟಕದಿಂದ ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನಾ ಧರಣಿ ಕೈಗೊಂಡು, ಜಿಲ್ಲಾಡಳಿತದ ಮೂಲಕ ರಾಷ್ಟ್ರಪತಿ ಹಾಗೂ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು. ಇದಾದ ಬಳಿಕ ಕೋರ್ಟ್ ವೃತ್ತದಲ್ಲಿ ಪ್ರತಿಭಟನೆ ಕೈಗೊಂಡಿದಲ್ಲದೇ ಕೆಲ ಹೊತ್ತು ರಸ್ತೆ ಬಂದ್ ಮಾಡಿ ಆಕ್ರೋಶ ಹೊರ ಹಾಕಲಾಯಿತು. ಈ ವೇಳೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ ಶಾ ವಿರುದ್ಧ ಘೋಷಣೆ ಕೂಗಿದಲ್ಲದೇ ಅವರ ಪ್ರತಿಕೃತಿಗಳಿಗೆ ಬೆಂಕಿ ಹಚ್ಚಲು ಮುಂದಾದರು. ಆದರೆ, ಪೊಲೀಸರು ಇದಕ್ಕೆ ಅವಕಾಶ ಕೊಡದೇ ಪ್ರತಿಕೃತಿಯನ್ನು ಎಳೆದೊಯ್ದರು. ಆಗ ಪೊಲೀಸರು ಹಾಗೂ ಪ್ರತಿಭಟನಾಕಾರರ ಮಧ್ಯೆ ತಳ್ಳಾಟ, ಮಾತಿನ ಚಕಮಕಿಗೂ ಕಾರಣವಾಯಿತು. ಕೊನೆಗೆ ಪೊಲೀಸರು ಪ್ರತಿಭಟನಾಕಾರರನ್ನು ಬಂಧಿಸಿ ಕರೆದೊಯ್ದು, ಆ ಬಳಿಕ ಬಿಡುಗಡೆ ಮಾಡುವ ಮೂಲಕ ಪ್ರತಿಭಟನೆಗೆ ಅಂತ್ಯ ಹಾಡಿದರು. ಯೂಥ್ ಕಾಂಗ್ರೆಸ್ ರಾಜ್ಯ ಉಪಾಧ್ಯಕ್ಷ ಅಬ್ದುಲ್ ದೇಸಾಯಿ, ರಾಜ್ಯ ಕಾರ್ಯದರ್ಶಿ ಫಿರೋಜ್ ಪಠಾಣ, ಮುಸ್ತಾಕ ನಿಪ್ಪಾಣಿ, ಆಸೀಫ್ ಸನದಿ, ಸಲೀಮ್ ಸಂಗನಮುಲ್ಲಾ, ಸದ್ದಾಂ ಮುಲ್ಲಾ ಇದ್ದರು.

ವೈರಾಗ್ಯನಿಧಿ ಅಕ್ಕ ನೃತ್ಯರೂಪಕ ಪ್ರದರ್ಶನ ಇಂದು

ಧಾರವಾಡ: ಮಹಾಶಿವರಣೆ ಅಕ್ಕ ಮಹಾದೇವಿಯ ಜೀವನ ಚರಿತ್ರೆ ಕುರಿತು ಭರತನಾಟ್ಯ ನೃತ್ಯ ರೂಪಕ ಪ್ರದರ್ಶನ 'ವೈರಾಗ್ಯನಿಧಿ ಅಕ್ಕ' ಕಾರ್ಯಕ್ರಮವನ್ನು ಏ. 13 ರಂದು ಸಂಜೆ 5ಕ್ಕೆ ನಗದ ಸೃಜನಾ ರಂಗಮಂದಿರದಲ್ಲಿ ಆಯೋಜಿಸಲಾಗಿದೆ ಎಂದು ರತಿಕಾ ನೃತ್ಯ ನಿಕೇತನದನಿರ್ದೇಶಕಿವಿದುಷಿನಾಗರತ್ನಹಡಗಲಿಹೇಳಿದರು.ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮುರುಘಾಮಠದ ಡಾ. ಮಲ್ಲಿಕಾರ್ಜುನ ಸ್ವಾಮೀಜಿ, ಮುಂಡರಗಿಯ ನಿಜಗುಣಪ್ರಭು ತೋಂಟದಾರ್ಯ ಸ್ವಾಮೀಜಿ, ಅಥಣಿಯ ಪ್ರಭು ಚನ್ನಬಸವ ಸ್ವಾಮೀಜಿ ಸಾನಿಧ್ಯದಲ್ಲಿ ಶರಣ ಚಿಂತಕ ಗೊ.ರು. ಚನ್ನಬಸಪ್ಪನವರು ಉದ್ಘಾಟಿಸಲಿದ್ದಾರೆ. ಅಕ್ಕಮಹಾದೇವಿ ಅವರ ವಿಶಿಷ್ಟ 12 ವಚನಗಳನ್ನು ಆಯ್ದುಕೊಂಡು ಅವುಗಳ ಸಾರ, ರಚನೆಯಾದ ಸಂದರ್ಭ, ಆ ಕಾಲದಲ್ಲಿ ಅನುಭವ ಮಂಟಪದಲ್ಲಿ ನಡೆದ ಚರ್ಚೆ, ಇವುಗಳನ್ನು ಜೀವಂತವಾಗಿಸಿ ಜನರಿಗೆ ಮನ ಮುಟ್ಟುವಂತೆ ವೈರಾಗ್ಯ ನಿಧಿ ಅಕ್ಕ ಅನ್ನುವ ವಿಶಿಷ್ಟ ದೃಶ್ಯ ಕಾವ್ಯ ರೂಪಕದ ಮೂಲಕ ತಲುಪಿಸುವುದೇ ಇದರ ಉದ್ದೇಶ. ಅಕ್ಕ ಕಂಡ ಸಮಾನತೆ, ಮಹಿಳಾ ಸಬಲೀಕರಣ, ಭಾವೈಕ್ಯತೆಯಸಂಕೇತವಾಗಿಈಕಾರ್ಯಕ್ರಮಸಂಯೋಜಿಸಲಾಗಿದ್ದು, ಉತ್ತರ ಕರ್ನಾಟಕದಲ್ಲಿ ಇದುವೇ ಪ್ರಥಮ ಪ್ರಯೋಗವಾಗಿದೆ. ಇದರಲ್ಲಿ ಎಲ್ಲಾ ಜಾತಿ, ಮತ ಪಂಥದ 130 ಕಿರಿಯ ,ಹಿರಿಯ, ವಿದ್ಯಾರ್ಥಿಗಳು, ಶ್ರೇಷ್ಠ ಕಲಾವಿದರು ಪಾಲ್ಗೊಳ್ಳಲಿ ದ್ದಾರೆ ಎಂದರು. ನಾಗರಾಜ ಹಡಗಲಿ, ಪ್ರಕಾಶ ಬಾಳಿಕಾಯಿ, ಮಹಾಂತೇಶ ಬೇತರುಮಠ, ಕೀಶೊರ ಬೊಗಾರ, ಇಂದಿರಾ ಕುಲಕರ್ಣಿ ಇದ್ದರು.

MVC No:127/2023

IN THE COURT OF THE II ADDITIONAL SENIOR CIVIL JUDGE & M.A.C.T COURT DHARWAD

PETITIONER : Vasu S/o Hanumantsa Hanumsagar **V/s**

RESPONDENTS : 1) Falguni S/o Manoranjan Ghosh, R/o Plot No.12/B, Adarsh Nagar, Kasugal Road, Keshwapur, Hubballi, Dist: Dharwad. (Owner of the TATA Nexon XM Car bearing its Regn.KA-25/MD-2809

CITATION U/O V RULE-20 R/W SECTION 151 OF CPC

WHEREAS, the above named petitioner has filed this petition for grant of compensation on account of injuries sustained by him in the motor vehicle accident. Now the matter is fixed on 12/05/2025 if any objection they can appear on the above said date at 10.30 AM. before this Hon'ble court. Failing to appear on the above said date and time, necessary order will be passed.

Given under my hand and seal of the court this the day 02-04-2025 at Dharwad.

By order of the Court
Sheristedar
II Addl. Senior Civil Judge & MACT Dharwad.

(S.S.KAMPALI)
Advocate for Petitioner, Dharwad

O.S No: 444/2023

IN THE COURT OF THE I ADDL SENIOR CIVIL JUDGE HUBBALLI AT: HUBBALLI

Plaintiffs: Smt. Neelavva W/o Ramappa Burli and another
V/s
Defendants: Smt. Paravva W/o Honnappa Burli and others
Defendant: 1) Smt. Paravva W/o Honnappa Burli, Age: 52 years, Occ: Household, R/o Ashraya Yojana Plot, Amargol, Hubballi, Dist: Dharwad.

CITATION

That the above named plaintiffs have filed this suit for relief of partition and separate posession with respect property bearing Hubli-Dharwad muncipal corporation PID No. 58041 (Old PID No. 22B/866) measuring 100.76 Sq.Mtrs. (1,084.17 Sq ft.) and the same is situated at Hosapeti Oni, Amargol Hubballi and the said case is posted on 11-06-2025 at 11-00 am and defendant No.1 Smt. Paravva W/o Honnappa Burli having any objection for the or claim with respect to said property and said prayer may appear in the court on the said date and time either in person or through Advocate and file his objections/written statement failing which the said suit would e decided Ex-parte.

Given under my signature and seal of the court this dated: 02-04-2025

Hubballi
02-04-2025

By the order of the Court
Sd/- **Shiredstedar**
I Addl. Senior Civil Judge & JMFC Court, Hubballi

Sd/- **[A.R. Pujar]**
Advocate for plaintiffs

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್

(ಒಂದು ಷೆಡ್ಯೂಲ್ ವಾಣಿಜ್ಯ ಬ್ಯಾಂಕ್)

ನೋಂದಾಯಿತ ಕಛೇರಿ: ದಿ ಫೇರ್‌ವೇ, ನೆಲಮತ್ತು ಮೊದಲನೇ ಮಹಡಿ, ಸರ್ವೆ ಸಂ. 10/1, 11/2 ಮತ್ತು 12/2ಬಿ, ದೊಮ್ಮಲೂರು ಪಕ್ಕ, ಕೋರಮಂಗಲ ಒಳ ವರ್ತುಲ ರಸ್ತೆ, ಇಜಿಎಲ್ ಬ್ಯುಸಿನೆಸ್ ಪಾರ್ಕ್ ನಂತರ, ಚಲ್ಲಘಟ್ಟ, ಬೆಂಗಳೂರು-560071.

ಇ-ಹರಾಜು ಸೂಚನೆ

2002ರ ಭದ್ರತಾ ಹಿತಾಸಕ್ತಿ ನಿಯಮಗಳ ಪ್ರಾವಿಸೋ ರೂಲ್ 8(6) ಮತ್ತು 9 ರೊಂದಿಗೆ ಓದಿಕೊಳ್ಳಬೇಕಾದ ಸೆಕ್ಯುರೈಟೆಜೇಷನ್ ಅಂಡ್ ರೀಕನ್ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್ ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ (ಸರ್ಫೇಸಿ ಕಾಯಿದೆ), 2002 ರಡಿ ಆಸ್ತಿಗಳ ಇ-ಹರಾಜು ಮಾರಾಟಕ್ಕಾಗಿ ಸಾರ್ವಜನಿಕ ಸೂಚನೆ

ಆದಾಗ್ಯೂ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿ ಸರ್ಫೇಸಿ ಕಾಯಿದೆಯ ಕಲಂ 13(4)ರಡಿ ಕೆಳಕಂಡ ಆಸ್ತಿಗಳನ್ನು ಸ್ವಾಧೀನಕ್ಕೆ ಪಡೆದುಕೊಂಡಿರುತ್ತಾರೆ. ಸಾಲಗಾರರಿಗೆ ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ವಿಸ್ತಾರವಾಗಿ ಮಾಹಿತಿ ನೀಡುವುದೇನೆಂದರೆ ಸಾಲ ಪಡೆಯಲು ಸಾಲಗಾರರು ಅಡಮಾನ ಮಾಡಿರುವ ಆಸ್ತಿಗಳನ್ನು ಬ್ಯಾಂಕಿಗೆ ಬಾಕಿಯಾಗಿರುವ ಸಾಲಗಳ ವಸೂಲಾತಿಗಾಗಿ "ಎಲ್ಲಿ ಹೇಗಿದೆಯೋ ಹಾಗೆಯೇ" ಹಾಗೂ "ಎಲ್ಲಿ ಏನಿದೆಯೋ ಹಾಗೆಯೇ" ಆಧಾರದಲ್ಲಿ ಆನ್‌ಲೈನ್ ಹರಾಜು (ಇ-ಹರಾಜು) ಮೂಲಕ ಸರ್ಫೇಸಿ ಕಾಯಿದೆಯಂತೆ ಇ-ಹರಾಜು ಮಾರಾಟ ಮಾಡಲಾಗುತ್ತದೆ.

ಕ್ರ. ಸಂ.	ಸಾಲದ ಖಾತಾ ಸಂಖ್ಯೆ	ಮೂಲ ಸಾಲಗಾರ/ ಸಹ-ಸಾಲಗಾರ/ ಜಾಮೀನುದಾರ/ಹೆಸರು	13-2 ನೋಟೀಸ್ ದಿನಾಂಕ	ಸ್ವಾಧೀನತೆಯ ದಿನಾಂಕ	ಪ್ರಸ್ತುತ ಬಾಕಿ ಮೊತ್ತ ದಿನಾಂಕ 09.04.2025 ರಂದು ಇದ್ದಂತೆ	ಆಸ್ತಿಯ ಪರಿಶೀಲನೆಯ ದಿನಾಂಕ ಮತ್ತು ಸಮಯ	ಮೀಸಲು ಬೆಲೆ ಐಎನ್‌ಆರ್	ಅರ್ನೆಸ್ಟ್ ಮನಿ ಡಿಪಾಸಿಟ್ (ಇಎಂಡಿ) ಐಎನ್‌ಆರ್	ಇ-ಹರಾಜಿನ ದಿನಾಂಕ ಮತ್ತು ಸಮಯ	ಬಿಡ್ ಸಲ್ಲಿಸಲು ಸ್ಥಳ ಮತ್ತು ಕೊನೆಯ ದಿನಾಂಕ ಮತ್ತು ಸಮಯ
1	30319420000226 & 45449430000850	1) ಶ್ರೀ ಸಂತೋಷ್ ಎ ಹೊಸಮನಿ ಅಲ್ಲದೇ: ಮೆಸಾ ಶ್ರೀ ವೀರಭದ್ರೇಶ್ವರ ಟ್ರೇಡರ್ಸ್, 2) ಶ್ರೀಮತಿ ಸಂಗೀತ ಸಂತೋಷ್ ಹೊಸಮನಿ	18.10.2024	06.01.2025	ರೂ. 49,48,630.40 (ನಲವತ್ತೊಂಭತ್ತು ಲಕ್ಷದ ನಲವತ್ತೆಂಟು ಸಾವಿರದ ಆರುನೂರ ಮೂವತ್ತು ರೂ. ಮತ್ತು ನಲವತ್ತು ಪೈಸೆ ಮಾತ್ರ)	23.04.2025 Time: 09:30 AM to 05:00 PM	ರೂ. 45,34,000/- (ನಲವತ್ತೈದು ಲಕ್ಷದ ಮೂವತ್ತನಾಲ್ಕು ಸಾವಿರ ರೂ. ಮಾತ್ರ)	ರೂ. 4,53,400/- (ನಾಲ್ಕು ಲಕ್ಷದ ಐವತ್ತೂರು ಸಾವಿರದ ನಾಲ್ಕುನೂರು ರೂ.ಗಳು ಮಾತ್ರ)	29.04.2025 @ 02:00 PM	28.04.2025, ಸಂಜೆ 05.00 ಗಂಟೆಯ ಒಳಗೆ ಜನ ಸ್ಮಾಲ್ ಫೈನಾನ್ ಬ್ಯಾಂಕ್ ಲಿ., ದಿ ಫೇರ್‌ವೇ, ನೆಲಮಹಡಿ ಮತ್ತು ಮೊದನೇ ಮಹಡಿ, ಸರ್ವೆ ಸಂ. 10/1, 11/2 ಮತ್ತು 12/2ಬಿ ದೊಮ್ಮಲೂರು ಪಕ್ಕ, ಕೋರಮಂಗಲ ಇನ್ನರ್ ರಿಂಗ್ ರಸ್ತೆ, ಇಜಿಎಲ್ ಬಿಸಿನೆಸ್ ಪಾರ್ಕ್ ನಂತರ, ಚಲ್ಲಘಟ್ಟ, ಬೆಂಗಳೂರು- 560071.
	ಭದ್ರತಾ ಆಸ್ತಿಯ ವಿವರಣೆ ಆಸ್ತಿ-1: ಸಕಲ ಸಮಸ್ತವೂ ಸೇರಿದ ಸ್ಥಿರಾಸ್ತಿಯ ವಸತಿ ಆಸ್ತಿ ಸಿ ಇ-ಸ್ವತ್ತು ಸಂ. 151300101600100324, ವಿಪಿಸಿ ಸಂ. 393, ಅಳತೆ ಒಟ್ಟು ಭೂ ಪ್ರದೇಶ 295 ಚ.ಮೀ. ಮತ್ತು ನಿರ್ಮಿತ ಪ್ರದೇಶ 154 ಚ.ಮೀ. (ಪೂರ್ವದಿಂದ ಪಶ್ಚಿಮಕ್ಕೆ-10.5 ಮತ್ತು ಉತ್ತರದಿಂದ ದಕ್ಷಿಣಕ್ಕೆ-53 ಚಮೀ) ಕಡಬಗಟ್ಟಿ ಗ್ರಾಮ, ಬ್ಲಾಕ್ ಅಲ್ಲಾವರ, ಜಿಲ್ಲೆ: ಧಾರವಾಡ. ಚಕ್ಕುಬಂದ್ಧಿ ಕೆಳಗಿನಂತಿದೆ: ಪೂರ್ವದ ಕಡೆಗೆ: ಚಂದ್ರವ್ವ ವಡೆಯರ್ ರವರಿಗೆ ಸೇರಿದ ಆಸ್ತಿ, ಪಶ್ಚಿಮದ ಕಡೆಗೆ: ಇಬ್ರಾಹಿಂ ಜೋಡಗೆರೆ ರವರಿಗೆ ಸೇರಿದ ಆಸ್ತಿ, ದಕ್ಷಿಣದ ಕಡೆಗೆ: ನಾಗೇಂದ್ರ ಹಳಿಯಾಳ್ಕರ್ ರವರಿಗೆ ಸೇರಿದ ಸರ್ವೆ ಸಂ. 190ರ ಆಸ್ತಿ, ಉತ್ತರದ ಕಡೆಗೆ: ಸರ್ಕಾರಿ ರಸ್ತೆ. **ಆಸ್ತಿ-2:** ಸಕಲ ಸಮಸ್ತವೂ ಸೇರಿದ ಸ್ಥಿರಾಸ್ತಿಯ ವಸತಿ ಆಸ್ತಿ ಇ-ಸ್ವತ್ತು ಸಂ. 151300101600100151, ಗ್ರಾಮ ಪಂಚಾಯಿತಿ ಸಂ. 94, ಅಳತೆ 122.85 ಚದರ ಮೀಟರ್, ಆರ್‌ಸಿಸಿ ಕಟ್ಟಡ ನಿರ್ಮಿತವಾಗಿದ್ದು, ಕಡಬಗಟ್ಟಿ ಗ್ರಾಮ,ತಾಲ್ಲೂಕು ಮತ್ತು ಜಿಲ್ಲೆ ಧಾರವಾಡ. ಚಕ್ಕುಬಂದ್ಧಿ ಕೆಳಗಿನಂತಿದೆ: ಪೂರ್ವದ : ನಿಂಗಪ್ಪ ಮುಕ್ಕೋಜಿ ರವರಿಗೆ ಸೇರಿದ ಆಸ್ತಿ, ಪಶ್ಚಿಮದ ಕಡೆಗೆ: ಮಲ್ಲಾಡ್ ಹುಕ್ಕೇರಿರವರಿಗೆ ಸೇರಿದ ಆಸ್ತಿ, ಉತ್ತರಕ್ಕೆ: ಗುರು ಪಿರೋಜಿ ರವರಿಗೆ ಸೇರಿದ ಆಸ್ತಿ, ದಕ್ಷಿಣದ ಕಡೆಗೆ: ಉತ್ತರದ ಕಡೆಗೆ: ಸರ್ಕಾರಿ ರಸ್ತೆ.								
2	45448649804511	1) ಮೆಸಾ ಶ್ರೀ ಪುಷ್ಪ ಸಿಂಡಿಕೇಟ್, 2) ಶ್ರೀ ಕುಶಾಲ್ ಚಂದ್ರ ಜೈನ್, 3) ಶ್ರೀಮತಿ ಉಷಾದೇವಿ ಕೆ ಜೈನ್	20.08.2020	02.04.2025	ರೂ. 1,81,47,556.70 (ಒಂದು ಕೋಟಿ ಎಂಭತ್ತೊಂದು ಲಕ್ಷದ ನಲವತ್ತೇಳು ಸಾವಿರದ ಐದುನೂರ ಐವತ್ತಾರು ರೂ. ಮತ್ತು ಎಪ್ಪತ್ತು ಪೈಸೆ ಮಾತ್ರ)	29.04.2025 Time: 09:30 AM to 05:00 PM	ರೂ. 72,03,000/- (ಎಪ್ಪತ್ತೆರಡು ಲಕ್ಷದ ಮೂರು ಸಾವಿರ ರೂ. ಮಾತ್ರ)	ರೂ. 7,20,300/- (ಏಳು ಲಕ್ಷದ ಇಪ್ಪತ್ತು ಸಾವಿರದ ಮುನ್ನೂರು ರೂ. ಗಳು ಮಾತ್ರ)	15.05.2025 @ 02:00 PM	14.05.2025, ಸಂಜೆ 05.00 ಗಂಟೆಯ ಒಳಗೆ ಜನ ಸ್ಮಾಲ್ ಫೈನಾನ್ ಬ್ಯಾಂಕ್ ಲಿ., ಮುಖ್ಯ ಕಛೇರಿ: ದಿ ಫೇರ್‌ವೇ, ನೆಲಮಹಡಿ ಮತ್ತು ಮೊದನೇ ಮಹಡಿ, ಸರ್ವೆ ಸಂ. 10/1, 11/2 ಮತ್ತು 12/2ಬಿ ದೊಮ್ಮಲೂರು ಪಕ್ಕ, ಕೋರಮಂಗಲ ಇನ್ನರ್ ರಿಂಗ್ ರಸ್ತೆ, ಇಜಿಎಲ್ ಬಿಸಿನೆಸ್ ಪ